ವೆರಿಮಚ್ ಕ್ರೂಯೆಲ್ ಆನ್ ದಟ್ ಅಕೇಶನ್. ಸರಿ ಎಲ್ಲಿದ್ದಾನೆ ಈಗ..." ಮಾತುಗಳಲ್ಲಿ ಭಾವುಕತೆ ಇಣುಕುವುದರೊಂದಿಗೆ ಕಣ್ಣಂಚಿನಲ್ಲೊಂದು ಹನಿ ಮಡುಗಟ್ಟಿತ್ತು. "ಆ ಘಟನೆಯಾದ ಮೂರು ದಿನಗಳ ನಂತರ ಇಬ್ರಾಹಿಂನನ್ನು ಅವರ ತಾಯಿ ತವರು ಮನೆಯಾದ ಕೂನೂರಿಗೆ ಬಿಟ್ಟು ಬಂದರಂತೆ. ಅಲ್ಲಿ ಸ್ಕೂಲಿಗೆ ಹೋಗದೆ ಟೀ ಫ್ಯಾಕ್ಟರಿಯಲ್ಲಿ ಒಂದು ವರ್ಷ ಕೆಲಸ ಮಾಡಿ, ಯಾವುದೋ ಸ್ಕ್ರ್ಯಾಪ್ ಹೋಲ್ ಸೇಲ್ ಅಂಗಡಿ ಸೇರಿದನಂತೆ. ವ್ಯಾಪಾರ ನಿಮಿತ್ತ ಲಾರಿಯಲ್ಲಿ ಕೊಯಮತ್ತೂರಿಗೆ ವಾರಕ್ಕೊಮ್ಮೆಯಾದರೂ ಹೋಗಿ ಬರುತ್ತಿದ್ದನಂತೆ. ಕಡೆಗೆ ಯಾವುದೋ ಕಾಂಟ್ಯಾಕ್ಟ್ ಸಿಕ್ಕಿ ಮುಂಬಯಿ ಸೇರಿದವನು ಸ್ಕ್ರ್ಯಾಪ್ ವ್ಯಾಪಾರದಲ್ಲಿ ಚನ್ನಾಗಿ ದುಡಿದನಂತೆ. ಕಡೆಗೆ ಜಾಸ್ತಿ ದುಡ್ಡು ಮಾಡಬೇಕೆಂಬ ದುರಾಸೆಗೆ ಬಿದ್ದು ಡ್ರಗ್ಸ್ ಸ್ಮಗ್ಲಿಂಗ್‌ಗೆ ಇಳಿದು ಎನ್‌ಕೌಂಟರ್ ಒಂದರಲ್ಲಿ ಸತ್ತು ಹೋದನಂತೆ. ಇಬ್ಬರು ಹೆಣ್ಣುಮಕ್ಕಳೊಂದಿಗೆ ಅವನ ಹೆಂಡತಿ ಕೂನೂರಿನಲ್ಲಿ ಸೆಟ್ಲ್ ಆಗಿದ್ದಾಳಂತೆ. ಒಂದು ಸಣ್ಣ ಸ್ವಂತ ಮನೆ, ಮನೆಯ ಹತ್ತಿರವೇ ಚಿಲ್ಲರೆ ಅಂಗಡಿ. ಜೀವನಕ್ಕೇನೂ ತೊಂದರೆ ಇಲ್ಲವಂತೆ. ಎರಡು ವರ್ಷಗಳ ಹಿಂದೆ ಕೋವಿಡ್ ಕಾಯಿಲೆಯಿಂದ ಅವನ ಅಮ್ಮ ತೀರಿಕೊಂಡರಂತೆ. ನಮ್ಮಮ್ಮ ಸಾಯುವುದಕ್ಕೆ ಹದಿನೈದು ದಿನಗಳ ಮೊದಲು ಊರಿನ ಯಾವುದೋ ವಿಷಯ ಬಂದಾಗ ಅವನ ಚರಿತ್ರೆಯನ್ನೂ ಹೇಳಿದ್ದಳು..." ನಾನೂ ಕಥೆಯಂತೆಯೇ ಇಬ್ರಾಹಿಂ ಬಗೆಗಿನ ವಿಷಯವನ್ನು ಬಿಚ್ಚಿಟ್ಟಿದ್ದೆ. "ಛೇ, ವಾಟ್ ಎ ಟ್ರಾಜಡಿ" ಎಂದವನಿಗೆ ಮತ್ತೊಂದು ಪೆಗ್ ವಿಸ್ಕಿ ಬೆರೆಸಿಕೊಟ್ಟಾಗ, "ಬೇಡ ಅನ್ನಿಸ್ತಾ ಇದೆ ಕಣೋ, ಯಾಕೋ ಈ ನಡುವೆ ಡ್ರಿಂಕ್ಸ್ ಜಾಸ್ತಿ ತಗೊಳೋಕೆ ಆಗ್ತಾ ಇಲ್ಲ. ತಗೊಳ್ಳೊ ಆಸೆ ಇದ್ರೂ ದೇಹ ರೆಸಿಸ್ಟ್ ಮಾಡ್ತದೆ. ಊಟದ್ದೂ ಅದೇ ಕಥೆ. ಆಂ ಇನ್ನೊಂದು ವಿಷಯ ನಿನಗೆ ಹೇಳಬೇಕು. ಐಯ್ಯಾಮ್ ಸಫರಿಂಗ್ ಫ್ರೆಮ್ ಪೈಲ್ಸ್ ಪ್ರಾಬ್ಲಂ. ನನ್ ಮಗುಂದು ಎಂಥಾ ಇರಿಟೇಶನ್ ಹುಟ್ಟಿಸ್ತದೆ ಗೊತ್ತಾ. ಇಡೀ ದೇಹವನ್ನೇ ಕಿತ್ತು ಚೂರು ಚೂರು ಮಾಡಿ ಬಿಸಾಕೋಣ ಅನ್ನಿಸ್ತದೆ ಒಮ್ಮೊಮ್ಮೆ. ಸರ್ಜರಿ ಕೂಡಾ ಮಾಡಿಸ್ಕೊಂಡೆ, ಏನೂ ಪ್ರಯೋಜನವಾಗಲಿಲ್ಲ. ಯೂರೋಪ್ ಮತ್ತು ಅಮೆರಿಕನ್ ಕಂಟ್ರೀಸಲ್ಲಿ ಇದೊಂದು ಕಾಮನ್ ರೋಗವಂತೆ. ಮೀಟ್ ಜಾಸ್ತಿ ತಿಂದರೆ ಇದು ವಿಪರೀತವಾಗಿ ಹುಟ್ಟಿಕೊಳ್ತದಂತೆ." ಎಂದವನು ಬಲವಂತವಾಗಿಯೆಂಬಂತೆ ವಿಸ್ಕಿಯನ್ನು ಸಿಪ್ ಮಾಡತೊಡಗಿದ. "ಓಹ್ ಐಯ್ಯಾಮ್ ಸಾರಿ. ಹೈದರಾಬಾದ್‌ನಲ್ಲಿ ಪೈಲ್ಸ್ ಸ್ಪೆಷಲಿಸ್ಟ್ ಮಸ್ತಾಗಿ ಇದಾರೆ. ನೀನು ಎರಡು ಮೂರು ದಿನ ಇದ್ದರೆ ಸಾಕು, ಅದನ್ನು ಬುಡಸಮೇತ ಕಿತ್ತು ಬಿಸಾಕಿಸಿ ನಿನ್ನನ್ನು ಖುಷಿಯಾಗಿ ವಾಪಸ್ಸು ಕಳಿಸ್ತೀನಿ" ಎಂದು ಅವನಿಗೆ ಆಶ್ವಾಸನೆ ಕೊಟ್ಟಿದ್ದೆ. ಅವನು ಖುಷಿಗೊಂಡವನಂತೆ, "ಓ ಮೈ ಗುಡ್ನೆಸ್. ನನಗೆ ಎರಡು ತಿಂಗಳು ಲಂಡನ್ನಿನಲ್ಲಿ ಕೆಲಸ ಇದೆ. ಅನ್ನವರಂಗೆ ನಾಳೆ ಹೋಗಿ ಹಿಂತಿರುಗಿ ಬಂದು ನಾಳಿದ್ದು ಬಾಂಬೆಗೆ ಹೋಗಿ ಅಲ್ಲಿಂದ ಲಂಡನ್ ಫ್ಲೈಟ್ ಹಿಡಿತಿನಿ. ಲಂಡನ್ನಲ್ಲಿ ಥೇಮ್ಸ್ ನದಿಯ ದಡದ ಮೇಲೆ ನಮ್ಮ ಮನೆ ಇರೋದು. ರಾತ್ರಿ ಬೆಳದಿಂಗಳಿನಲ್ಲಿ ಥೇಮ್ಸ್ ನೋಡಬೇಕು, ಆದರೆ ಯಾಕೋ ನನಗದು ಯಾವೊತ್ತೂ ಚಿಕ್ಕಮಗಳೂರಿನ ನಮ್ಮ ಎಸ್ಟೇಟ್ ಕೊಟ್ಟಂತೆ ಪೂರ್ಣವಾದ ಖುಷಿಯನ್ನು ಕೊಟ್ಟಿತೆಂದು ಅನ್ನಿಸಲೇ ಇಲ್ಲ..." ಅವನು ಪದಗಳಿಗೆ ತಡಕಾಡುತ್ತ ಮಾತನಾಡುತ್ತಿದ್ದಾನೆ ಅನ್ನಿಸಿತು, "ನಾಲ್ಕು ತಿಂಗಳು ಕ್ಲಾಸ್‌ಮೇಟ್ ಆಗಿದ್ದೆಯೋ ಏನೋ ನೀನು ನನಗೆ. ಆ ಸಮಯದಲ್ಲಿ ಮೂರು ವರ್ಷ ವಯಸ್ಸಿನಲ್ಲಿ ಲಂಡನ್‌ಗೆ ಹೋದವನು ನಾವು ಏಳನೇ ಕ್ಲಾಸಿನಲ್ಲಿ ಇದ್ದಾಗ ತಿರುಗಿ ವಾಪಸ್ಸು ಬಂದಿದ್ದು. ಇಷ್ಟ ಬಂದಾಗ ಸ್ಕೂಲಿಗೆ ಬರುತ್ತಿದ್ದೆ. ಮಿಕ್ಕಂತೆ ಜೀಪು, ಕಾರುಗಳಲ್ಲಿ ಕುಂತು ಕಾಫಿ ಎಸ್ಟೇಟ್‌ನಲ್ಲಿ ತಿರುಗಾಡುತ್ತಿದ್ದೆ. ಆ ಅವಧಿಯಲ್ಲಿ ನಿನ್ನೊಂದಿಗೆ ಒಂದಿಪ್ಪತ್ತು ಸಾರಿ ಮಾತನಾಡಿದ್ದೆನೇನೋ. ನಿನ್ನ ಒಂದು ಹುಟ್ಟು ಹಬ್ಬಕ್ಕೆ ಸ್ಕೂಲಿನ ಮಕ್ಕಳಿಗೆಲ್ಲ ಬಟ್ಟೆ, ಶೂಗಳನ್ನು ಹಂಚಿ, ಸ್ಕೂಲಿನಲ್ಲೆ ಕೇಕ್ ಕಟ್ ಮಾಡಿದ್ದೆ. ಮತ್ತು ಊಟಕ್ಕೆ ಬಿರಿಯಾನಿ, ಮೈಸೂರು ಪಾಕ್ ಬಡಿಸಿದ್ದರು. ನಿನ್ನಂತೆ ನಾವೂ ಕೂಡ ಆ ದೊಡ್ಡ ಎಸ್ಟೇಟ್ ಮನೆಯಲ್ಲಿ ಹುಟ್ಟಬೇಕಿತ್ತೆಂದು ಸ್ಕೂಲ್ ಮಕ್ಕಳು ಮಾತನಾಡಿಕೊಳ್ಳುತ್ತಿದ್ದೆವು. ನಿಮ್ಮ ಮನೆಗೆ ಕೆಲಸಕ್ಕೆ ಬರುತ್ತಿದ್ದ ಅಮ್ಮ ವಾರದಲ್ಲಿ ಎರಡು ಬಾರಿಯಾದರೂ ನಿನ್ನ ಬಗ್ಗೆ ಹೇಳುತ್ತಿದ್ದಳು. ನಿಜ ಹೇಳಲಾ, ಅಂಥ ಸಮಯದಲ್ಲಿ ನಿನ್ನ ಮೇಲೆ ಅಗಾಧವಾದ ಕೋಪ, ಹೊಟ್ಟೆಕಿಚ್ಚು ಮೂಡಿ ನಿನ್ನನ್ನು ಹಿಡಿದು ಚನ್ನಾಗಿ ಹೊಡೆಯಬೇಕೆನಿಸುತ್ತಿತ್ತು.